ಈಗ ಬಹಳ ಕಡೆ ಒತ್ತಡ ಬರುತ್ತಿದೆ, ಶಾಸಕರಿಂದಲೂ ಪತ್ರ, ಫೋನ್‌ಗಳು ಬರುತ್ತಿವೆ, ಈ ನಮ್ಮ ಅಂಗನವಾಡಿ ಟೀಚರ್‌ಗೆ ಆಯ್ಕೆ ಮಾಡಬೇಕು ಎಂದು. ಆ ರೀತಿಯಲ್ಲಿ ಶಾಸಕರ ಶಿಫಾರಸ್ ಮೇಲೆ ನಾನು ಆಯ್ಕೆ ಮಾಡುವುದಕ್ಕೆ ಬರುವುದಿಲ್ಲ. ಸರ್ವೀಸ್ ಪ್ಲಸ್ ಎಸ್.ಎಸ್.ಎಲ್.ಸಿ. ಮಾರ್ಕ್ಸ್‌ನಲ್ಲಿ ಮೆರಿಟ್ ಇರಬೇಕು, ಅಥವಾ ಪಿ.ಯು.ಸಿ. ಯಲ್ಲಿ ಮೆರಿಟ್ ಇರಬೇಕು, ಆದರಲ್ಲಿ ಡಿಗ್ರಿ ಆಗಿರುವ ಅಂಗನವಾಡಿ ವರ್ಕರ್ಸ್ ಇದ್ದಾರೆ. ಅವರಲ್ಲೂ ಮೆರಿಟ್ ಇದ್ದರೆ ಸರ್ವೀಸ್ ಜೊತೆಯಲ್ಲಿ ಅದನ್ನು ಇನ್‌ಕ್ಲೂಡ್ ಮಾಡಿಕೊಂಡು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ. ದಯವಿಟ್ಟು ಎಲ್ಲರೂ ಅದನ್ನು ತಿಳಿದುಕೊಳ್ಳಬೇಕು.

ಬೇಲೂರು ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ ಉಪ ಮಾರುಕಟ್ಟೆಗೆ ಸ್ಥಳ ಒದಗಿಸುವುದು.

48(419) - ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ (ಬೇಲೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕೃಷಿ ಮಾರುಕಟ್ಟೆಯಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು;

ಆ) ಬೇಲೂರು ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ ಉಪ ಮಾರುಕಟ್ಟೆಗೆ ಸ್ಥಳ ಒದಗಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಇ) ಮಾರುಕಟ್ಟೆಗೆ ಒದಗಿಸಿರುವ ಜೀಪಿನ ವಾರ್ಷಿಕ ಖರ್ಚು ಎಷ್ಟು;

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ

ಆ) ಆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಇ) ಬೇಲೂರು ಸಮಿತಿಯಲ್ಲಿರುವ ವಾಹನಕ್ಕೆ ಪ್ರತಿ ತಿಂಗಳು ಅಂದಾಜು ರೂ. 3703-00 ರಂತೆ ಇಂಧನ ವೆಚ್ಚ ಭರಿಸಲಾಗುತ್ತಿದ್ದು, ಈ ವರ್ಷದಲ್ಲಿ ಇಂಧನ ಮತ್ತು ದುರಸ್ತಿಗಾಗಿ ಸೇರಿ ರೂ. 58,419-00 ವೆಚ್ಚವಾಗಿರುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಕೃಷಿ ಮಾರುಕಟ್ಟೆಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 'ಇಲ್ಲ' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಾಯವಿಲ್ಲವೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ : ಮಾನ್ಯ ಅಧ್ಯಕ್ಷರೆ, ಇಲ್ಲ. ಆದರೆ ನಮ್ಮ ಎ.ಪಿ.ಎಂ.ಸಿ.ಯಿಂದ ಶೇಕಡ 30ರಷ್ಟು ಕನ್ಸಾಲಿಡೇಟೆಡ್ ಫಂಡ್ ಎಂದು ಕೇವಲ ಸ್ಕಾಲರಿ ಸಲುವಾಗಿ ಸೀಮಿತವಾಗಿ ಹಣ ಬರುವುದರಿಂದ ಸರ್ಕಾರಕ್ಕೆ ಆದಾಯವಿಲ್ಲವೆನ್ನುವ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಹಳೇಬೀಡಿನಲ್ಲಿ ಉಪ-ಮಾರುಕಟ್ಟೆಗೆ ಎಲ್.ಓ.ಸಿ. ಸಿಕ್ಕಿದ್ದರೂ ಸಹ ಇದಕ್ಕೆ ಮಂಜೂರಾತಿ ಕೊಡುವುದಕ್ಕೆ ಎಷ್ಟು ವರ್ಷ ಬೇಕು? ಡಿಪಾರ್ಟ್‌ಮೆಂಟ್‌ನಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನತಕ್ಕದ್ದನ್ನು ತಾವು ಒಪ್ಪಿಕೊಳ್ಳುತ್ತೀರಾ? ಏಕೆಂದರೆ ಅವರು ಹೋಗಿ ಪ್ರಯತ್ನ ಮಾಡಿದ್ದರೆ ಅದು ಆಗುತ್ತಿತ್ತು; ಆ ಪ್ರಯತ್ನವನ್ನೇ ಮಾಡದೇ ಒಂದು ವರ್ಷದಿಂದ ಅದು ಹಾಗೆಯೇ ಇದೆ. ದಯಮಾಡಿ ಅದಕ್ಕೆ ಮಂಜೂರಾತಿ ಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ಮಾನ್ಯ ಅಧ್ಯಕ್ಷರೆ, ಈ ಹಳೇಬೀಡಿನಲ್ಲಿ ಉಪ ಮಾರುಕಟ್ಟೆ ಸ್ಥಾಪನೆಗಾಗಿ ನಮ್ಮ ಇಲಾಖೆಗೆ ಆ ಕಮಿಟಿಯಿಂದ 24-5-1997ರಲ್ಲಿ ಪ್ರಸ್ತಾಪ ಬಂತು. ಅದರ ನಂತರ ತಕ್ಷಣದಲ್ಲಿ ದಿನಾಂಕ 5-6-1997ರಲ್ಲಿ ನಿರ್ದೇಶಕರು ಸರ್ಕಾರಕ್ಕೆ ಬರೆದರು. ಯಾವುದೋ ಒಂದು ಸ್ಥಳವನ್ನು ಗುರುತಿಸಿ ಎ.ಸಿ., ತಹಶೀಲ್ದಾರ್ ಸೇರಿದಂತೆ ಡಿ.ಸಿ. ಡಿ.ವಿ.ಸಿ.ಯವರು ರೆಕಮೆಂಡ್ ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಅಲ್ಲಿ ಯಾವುದೋ ಒಂದು ಕೆರೆ ಹೊಂಡ ಇರುವುದರಿಂದ ಅಲ್ಲಿ ಉಪ-ಮಾರುಕಟ್ಟೆ ಮಾಡುವುದಕ್ಕೆ ಬರುವುದಿಲ್ಲವೆಂದು ಸರ್ಕಾರದಿಂದ ಪ್ರಸ್ತಾಪನೆ ಬಂತು. ಇವೆಲ್ಲಾ ಆಗುವುದರಲ್ಲಿ ಎರಡ್ಮೂರು ವರ್ಷ ಸಮಯ ತೆಗೆದುಕೊಂಡಿತು. ಆಮೇಲೆ ಮಾನ್ಯ ಪುಟ್ಟರಂಗನಾಥ್‌ರವರು ಕಂದಾಯ ಇಲಾಖೆಗೆ ದಿನಾಂಕ 3-12-2000ರಂದು ಪತ್ರ ಬರೆದು ತಿಳಿಸಿದ್ದಾರೆ. ಆ ಪತ್ರ ಬಂದಮೇಲೆ ಮತ್ತೆ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಮಾರುಕಟ್ಟೆ ಸಮಿತಿಯವರು ಸರ್ಕಾರಕ್ಕೆ ಮತ್ತು ಕಂದಾಯ ಇಲಾಖೆಯಲ್ಲಿ ಈಗಾಗಲೇ ಈ ಬಗ್ಗೆ ಕೇಳಲಾಗಿದ್ದು ನಾವೂ ಕೂಡ ಈ ಬಗ್ಗೆ ಕೇಳಿದ್ದೇವೆ, ಆ ಸ್ಥಳ ಕೊಡುವ ಬಗ್ಗೆ ಕಂದಾಯ ಇಲಾಖೆಯಿಂದ ಇನ್ನೂ ಯಾವುದೇ ನಿರ್ಣಯವಾಗಿಲ್ಲ, ಆ ನಿರ್ಣಯವಾದ ನಂತರ ನಾವೂ ಆ ಜಾಗದಲ್ಲಿ ಮಾರುಕಟ್ಟೆಯನ್ನು ಸ್ಥಾಪನೆ ಮಾಡಿ ಅಭಿವೃದ್ಧಿ ಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ನಮ್ಮ ಮಾನ್ಯ ಪುಟ್ಟರಂಗನಾಥ್‌ರವರಿಗೂ ಜಾಗದ ಬಗ್ಗೆ ವಿಷಯ ಗೊತ್ತಿದೆ. ಅವರೇನಾದರೂ ಬೇರೆ ಸ್ಥಳವನ್ನು ಕೊಟ್ಟರೆ ಕೂಡಲೇ ನಾವು ಮಾಡುತ್ತೇವೆ. ನಾನು 5ನೇ ತಿಂಗಳಿನಲ್ಲಿ ಬೇಲೂರಿಗೆ ಭೇಟಿ ಕೊಟ್ಟಾಗ ನಮ್ಮ ಕಾರ್ಯದರ್ಶಿಯವರಿಗೂ ಕೂಡ ಈ ಬಗ್ಗೆ ಆದಷ್ಟು ಬೇಗ ಕ್ರಮ ಜರುಗಿಸಿ ಎಂದು ನಿರ್ದೇಶನವನ್ನೂ ಕೂಡ ಕೊಟ್ಟು ಬಂದಿದ್ದೇನೆ. ಕಂದಾಯ ಇಲಾಖೆಯಿಂದ ಮಂಜೂರು ಆದ ತಕ್ಷಣ ನಾವು ಆದಕ್ಕೆ ಕಾರ್ಯತತ್ವರರಾಗುತ್ತೇವೆ. ತಾವೇನಾದರೂ ಬೇರೆ ಜಾಗವನ್ನಾದರೂ ಕೊಡುವುದಕ್ಕೆ ತಯಾರಿದ್ದರೆ ಅಲ್ಲಿಯೇ ನಾವು ಅಭಿವೃದ್ಧಿಪಡಿಸುತ್ತೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಈ ಕೃಷಿ ಮಾರುಕಟ್ಟೆಗೆ ಕೊಟ್ಟಿರತಕ್ಕಂಥ ಜೀವನ ಖರ್ಚು ಬಹುಶಃ ಅಲ್ಲಿ ಆಗತಕ್ಕಂಥ ಆದಾಯಕ್ಕಿಂತ ಹೆಚ್ಚು ಆಗುತ್ತದೆ ಎನ್ನುವುದು ನನ್ನ ಭಾವನೆ. ಏಕೆಂದರೆ ತಮ್ಮ ಉತ್ತರದಲ್ಲಿ ಪ್ರತಿ ತಿಂಗಳು 3703 ರೂಪಾಯಿ ಡೀಸೆಲ್‌ಗೆ ಕೊಡುತ್ತೇವೆಂದು ಹೇಳಿದ್ದೀರಿ. ಒಂದು ವರ್ಷಕ್ಕೆ ರಿಪೇರಿಗಾಗಿ ಒಟ್ಟು 55419 ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದೀರಿ. ಈ ಜೀಪ್‌ಗಳು ಕೆಲಸವಿಲ್ಲದಿದ್ದರೂ ಸುಮ್ಮನೆ ತಿರುಗುತ್ತಾ ಇರುತ್ತವೆ. ಅದಕ್ಕೊಂದು ಕಟ್ಟಳೆ ಹಾಕಿದರೆ ಬಹಳ ಒಳ್ಳೆಯದು. ಸರ್ಕಾರಕ್ಕೆ ದುಡ್ಡು ಉಳಿಯುತ್ತದೆ ಎಂದು ನನ್ನ ಭಾವನೆ. ತಾವೇನು ಹೇಳುತ್ತೀರಿ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ನಾವೂ ವಾಹನಗಳನ್ನು ಯಾವ ರೀತಿ ಓಡಿಸಬೇಕು ಎಂಬ ಬಗ್ಗೆ ಪ್ರತಿಯೊಂದು ಮಾರುಕಟ್ಟೆಯಲ್ಲೂ ತಮ್ಮದೇ ಆದಂಥ ಕೆಲವು ನಿಯಮಾವಳಿಗಳನ್ನು ಮಾಡಿಕೊಂಡಿರಲಾಗುತ್ತದೆ. 2000-01ನೇ ಸಾಲಿನಲ್ಲಿ ಇಡೀ ವರ್ಷಕ್ಕೆ 4 ಸಾವಿರ ರೂಪಾಯಿಗಳು ಖರ್ಚಾಗಿದೆ. 2001-02ನೇ ಸಾಲಿನಲ್ಲಿ 44 ಸಾವಿರ ರೂಪಾಯಿಗಳು ಖರ್ಚಾಗಿದೆ. ಒಂದು ವರ್ಷದಲ್ಲಿ ಅಭಿವೃದ್ಧಿ ಕೆಲಸ ಸಲುವಾಗಿ ಜೀಪ್‌ನಲ್ಲಿ ಓಡಾಡಲಾಗಿದೆ. ಇದಕ್ಕಾಗಿ 40 ರಿಂದ 44 ಸಾವಿರ ಖರ್ಚಾಗಿದೆ ಎಂದರೆ ಅದು ಮಹಾ ದೊಡ್ಡ ಮೊತ್ತವೆಂದು ನಾನು ತಿಳಿದುಕೊಂಡಿಲ್ಲ. ಅದರಲ್ಲೇನಾದರೂ ಅವ್ಯವಹಾರ ಆಗುತ್ತಿದ್ದರೆ, ದುರುಪಯೋಗವಾಗುತ್ತಿದ್ದರೆ ಆ ರೀತಿಯಾಗದಂತೆ ನಾವು ಅವರಿಗೆ ಸರಿಯಾಗಿ ನೋಡಿಕೊಳ್ಳುವಂತೆ ಎ.ಪಿ.ಎಂ.ಸಿ. ಯವರಿಗೆ ಆದೇಶ ಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಹಾಸನ ರೆಗ್ಯುಲೇಟೆಡ್ ಮಾರ್ಕೆಟ್ ಪರಿಮಿತಿಯೊಳಗೆ ಕೆಲವೊಂದು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸಂತೆಯನ್ನು ಸಬ್-ಮಾರ್ಕೆಟ್ ಆಗಿ ಪರಿವರ್ತನೆ ಮಾಡತ್ತೇವೆಂದು ಹೇಳಿ ಒಂದು ಪ್ರಪೋಸಲ್ ಇತ್ತು ಎಂದು ಕೇಳಿದ್ದೆ. ಅದು

10.30 ಪಿ.ಎಂ.

ಈ ಪ್ರಪೋಸಲ್ ಆಗುವ ಹಂತದಲ್ಲಿ ಇದೆಯೋ ಅಥವಾ ಮಂಜೂರಾತಿ ಆಗಿದೆಯೋ? ಇದು ಮಂಜೂರಾತಿ ಆಗಿದ್ದರೆ, ಯಾವಾಗ ಈ ಸಬ್-ಮಾರ್ಕೆಟ್‌ಗಳನ್ನು ಮಾಡುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) : ಮಾನ್ಯ ಅಧ್ಯಕ್ಷರೇ, ಈ ಪ್ರಪೋಜಲ್ ನಮ್ಮ ಇಲಾಖೆಗೆ ಬಂದಿಲ್ಲ, ಅವರು ಯಾವ ಪ್ರಪೋಜಲ್ ಕಳುಹಿಸಿದ್ದಾರೋ ನಮಗೆ ಗೊತ್ತಿಲ್ಲ. ಆ ರೀತಿ ಏನಾದರೂ ಪ್ರಪೋಜಲ್ ಬಂದರ್ ಖಂಡಿತವಾಗಿ ಇದರ ಬಗ್ಗೆ ವಿಚಾರಣೆ ಮಾಡಿ ಅಲ್ಲಿ ಸಂತೆಗಳನ್ನು ಮಾಡುವಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಹಳದಿ ಪಡಿತರ ಚೀಟಿ ನೀಡುವ ಬಗ್ಗೆ.

49(368) - ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನರಿಗೆ ಹಳದಿ ಪಡಿತರ ಚೀಟಿ ನೀಡುವ ಬಗ್ಗೆ ನಡೆಸುತ್ತಿರುವ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದೆಯೇ;

ಆ) ಈ ಯೋಜನೆ ಅಡಿಯಲ್ಲಿ ಎಷ್ಟು ಜನರಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು;

ಇ) ಈ ಯೋಜನೆಯನ್ನು ನಗರ ಪ್ರದೇಶದ ಕೊಳಚೆ ಪ್ರದೇಶದ ಜನರಿಗೆ ಮಾತ್ರ ಸೀಮಿತಗೊಳಿಸಲಾಗಿದೆಯೇ, ಅಥವಾ ಕೊಳಚೆ ಪ್ರದೇಶ ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಜನರಿಗೂ ವಿಸ್ತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? ವಿವರ ನೀಡುವುದು.